ಸಿರಿಧಾನ್ಯ ಮೇಳ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಇದೇ 9ರಿಂದ 11ರವರೆಗೆ ಮೂರು ದಿನಗಳ 'ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ' ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, 'ಶ್ರೀಶ್ರೀ ರವಿಶಂಕರ್ ಗುರೂಜಿ ಅವರ ಸಾನ್ನಿಧ್ಯದಲ್ಲಿ ಸಿರಿಧಾನ್ಯಗಳ ಕುರಿತು ನಡೆಯುವ ಚಿಂತನ-ಮಂಥನ ಗೋಷ್ಠಿ ನಡೆಯಲಿದೆ. ಗೋಷ್ಠಿಯಲ್ಲಿ ದೇಶ-ವಿದೇಶಗಳ ಗಣ್ಯರು ಭಾಗಿಯಾಗಲಿದ್ದಾರೆ' ಎಂದು ತಿಳಿಸಿದರು.

'ಸಂಸ್ಕರಿತ ಸಿರಿಧಾನ್ಯಗಳ ಪ್ರದರ್ಶನ ಮತ್ತು ಮಾರಾಟ ಸೇರಿದಂತೆ, ಮೇಳದಲ್ಲಿ 180ಕ್ಕೂ ಹೆಚ್ಚು ಮಳಿಗೆಗಳು ತೆರೆಯಲಾಗುವುದು. ಜೊತೆಗೆ ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದವೂ ನಡೆಯಲಿದೆ. ಸಿರಿಧಾನ್ಯಗಳನ್ನು ಸಂಸ್ಕರಿಸುವ ಆಧುನಿಕ ಯಂತ್ರೋಪಕರಣ ಪ್ರದರ್ಶನವೂ ಮೇಳದಲ್ಲಿರಲಿದೆ' ಎಂದರು.



ವಿಶ್ವ ಸಿರಿಧಾನ್ಯಗಳ ಮೇಳದ ಆಂಗವಾಗಿ ನಗರದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿವಿಧ ತಳಿಯ ಸಿರಿಧಾನ್ಯಗಳನ್ನು ಪ್ರದರ್ಶಿಸಲಾಯಿತು. (ಎಡದಿಂದ) ಬಿ.ಬೋರಯ್ಯ, ಎಸ್.ವಿ. ಸುರೇಶ್, ರಂಗನಾಥ್ ಪ್ರಸಾದ್ ಮತ್ತು ಉದಯ ಕುಮಾರ ಕೊಳ್ಳಿಮಠ, ನಾಗರಾಜ ಟಿ. ಈ. ವಾಲ್ಗೊಂಡಿದ್ದರು

ಇದೇ 9ರಂದು ಕೃಷಿ ಸಚಿವ ಚಲುವರಾಯಸ್ವಾಮಿ ಮೇಳವನ್ನು ಉದ್ಘಾಟಿಸಲಿದ್ದಾರೆ. ಡಿ. 10ರಂದು ನಡೆಯುವ 'ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ'ಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಮಟ್ಟದ ವಿಚಾರಸಂಕಿರಣವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಲಿದ್ದಾರೆ. ಮೇಳಕ್ಕೆ ಉಚಿತ ಪ್ರವೇಶವಿದ್ದು, ರೈತರು ಸೇರಿದಂತೆ ಎಲ್ಲರೂ ಭಾಗವಹಿಸಬಹುದು' ಎಂದು ತಿಳಿಸಿದರು.

ಜಿಕೆವಿಕೆಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಬಿ. ಬೋರಯ್ಯ, ಅಖಿಲ ಭಾರತೀಯ ಸುಸಂಘಟಿತ ಸಂಶೋಧನಾ ಪ್ರಾಯೋಜನದ ಮುಖ್ಯಸ್ಥ ನಾಗರಾಜ ಟಿ. ಈ., ಶ್ರೀ ಶ್ರೀ ನೈಸರ್ಗಿಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ್ ಪ್ರಸಾದ್ ಮತ್ತು ಉದಯ ಕುಮಾರ ಕೊಳ್ಳಿಮಠ ಇದ್ದರು.

08-12-2023
Praja Vani Pg.3c

ಜಾಗತಿಕ ಮಟ್ಟದ ಸಿರಿಧಾನ್ಯ ಮೇಳ

ಬೆಂಗಳೂರು: ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಅವರಣದಲ್ಲಿ ಬೆಂಗಳೂರು ಕೃಷಿ ವಿವಿ ಸಹಯೋಗದಲ್ಲಿ ಶನಿವಾರದಿಂದ ಸೋಮವಾರವರೆಗೆ (ಡಿ. 9-11) ಜಾಗತಿಕ ಮಟ್ಟದ ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ ಆಯೋಜಿಸಲಾಗಿದೆ.

» ಆರ್ಟ್ ಆಫ್ ಲಿವಿಂಗ್ ಕೇಂದ್ರದಲ್ಲಿ ಆಯೋಜನೆ

ಶ್ರೀ ನೈಸರ್ಗಿಕ್ ಮತ್ತು ಬೆಂಗಳೂರು ಕೃಷಿ ವಿವಿಗಳು ಜಂಟಿಯಾಗಿ ಮೇಳವನ್ನು ಆಯೋಜಿಸಲಿದ್ದು, ದೇಶ-ವಿದೇಶಗಳ ಪರಿಣಿತರು ಭಾಗವಹಿಸಲಿದ್ದಾರೆ. ವಾಣಿಜ್ಯ ದೃಷ್ಟಿಯಿಂದ ಮಾರಾಟಗಾರರು ಮತ್ತು ಖರೀದಿದಾರರಿಗೆ ಇದು ಸೂಕ್ತ ವೇದಿಕೆಯಾಗಲಿದೆ. ಮೇಳದಲ್ಲಿ 180ಕ್ಕೂ ಅಧಿಕ ಮಳಿಗೆಗಳು ಇರಲಿವೆ. ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದ ಏರ್ಪಡಿಸಲಾಗಿದೆ. ಸಿರಿಧಾನ್ಯಗಳ ಸಂಸ್ಕರಣೆ ಮಾಡುವ ಆಧುನಿಕ ಯಂತ್ರೋಪಕರಣ ತಂತ್ರಜ್ಞಾನಗಳ ಪ್ರದರ್ಶನ ಇರಲಿದೆ ಎಂದು ಬೆಂ. ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ತಿಳಿಸಿದರು.

ಸಿರಿಧಾನ್ಯಗಳನ್ನು ಆಹಾರದ ಒಂದು ಭಾಗವಾಗಿ ಮಾಡುವ ಜತೆಗೆ ಆರೋಗ್ಯ-ಪ್ರಜ್ಞೆ ಮತ್ತು ಭೂಸ್ನೇಹಿ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಲಾಗಿದೆ. 9ರಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 10ರಂದು ವಿಚಾರಸಂಕಿರಣ ಉದ್ಘಾಟಿಸುತ್ತಿದ್ದಾರೆ ಎಂದರು. ಶ್ರೀ ನೈಸರ್ಗಿಕ್ ಸಂಸ್ಥೆಯ ವ್ಯವಸ್ಥಾಪಕ .ನಿರ್ದೇಶಕ ರಂಗನಾಥ್ ಪ್ರಸಾದ್, ಕೃಷಿ ವಿವಿಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ. ಬಿ.ಬೋರಯ್ಯ ಇದ್ದರು.



ಜಾಗತಿಕಮಟ್ಟದ ಸಿರಿಧಾನ್ಯ ಮೇಳದಲ್ಲಿ ಪ್ರದರ್ಶನಗೊಳ್ಳಲಿರುವ ವಿವಿಧ ತಳಿಗಳನ್ನು ಡಾ. ಸುರೇಶ ಗುರುವಾರ ಪ್ರದರ್ಶಿಸಿದರು. ರಂಗನಾಥ್ ಪ್ರಸಾದ್, ಬಿ.ಬೋರಯ್ಯ ಇತರರಿದ್ದರು.

08-12-2023
Vijaya Vani Pg.2b

ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ ಕುರಿತ ವಿಚಾರ ಸಂಕಿರಣ ಉದ್ಘಾಟಿಸಲಿರುವ ಡಿಸಿಎಂ

ಆರ್ಟ್ ಆಫ್ ಲಿವಿಂಗ್‌ನಲ್ಲಿ ವಿಶ್ವ ಸಿರಿಧಾನ್ಯ ಮೇಳ ನಾಳೆಯಿಂದ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷದ ಅಂಗವಾಗಿ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಡಿ.9 ರಿಂದ 11 ರವರೆಗೆ ಜಾಗತಿಕ ಮಟ್ಟದ ಸಿರಿಧಾನ್ಯ ಮೇಳ ಆಯೋಜಿಸಲಾಗಿದೆ.

- ರವಿಶಂಕರ್ ಗುರೂಜಿ ಸಾನಿಧ್ಯದಲ್ಲಿ ಸಿರಿಧಾನ್ಯಗಳ ಚಿಂತನ-ಮಂಥನ
- ಶಿಕ್ಷಣ ತಜ್ಞರು, ವಿದ್ವಾಂಸರು, ಸಂಶೋಧಕರು, ವೈಜ್ಞಾನಿಕ ಸಂಸ್ಥೆಗಳು ಭಾಗಿ

ಕೃಷಿ ಸಚಿವ ಚೆಲುವರಾಯಸ್ವಾಮಿ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಡಿ.10 ರಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ ಕುರಿತ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ರವಿಶಂಕರ್ ಗುರೂಜಿ ಸಾನಿಧ್ಯದಲ್ಲಿ ಸಿರಿಧಾನ್ಯಗಳ ಚಿಂತನ, ಮಂಥನ ನಡೆಯಲಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಶ್ವ ಇಂದು ಜಾಗತಿಕ ಹವಾಮಾನ ಬದಲಾವಣೆ ಹಾಗೂ ಭೂಮಿ ಫಲವತ್ತತೆ ನಾಶವಾಗುವ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸಿರಿಧಾನ್ಯಗಳು ಭರವಸೆಯ ದೀಪವಾಗಿ ಹೊರಹೊಮ್ಮುತ್ತಿವೆ. ವೈವಿಧ್ಯಮಯ ಕೃಷಿ ಹವಾಮಾನ ಪರಿಸ್ಥಿತಿಗಳಲ್ಲಿ ಅಸಾಧಾರಣ ಪೌಷ್ಟಿಕಾಂಶದ ಅಂಶವನ್ನು ಇವು ಹೊಂದಿವೆ. ಶಿಕ್ಷಣ ತಜ್ಞರು, ವಿದ್ವಾಂಸರು, ಸಂಶೋಧಕರು, ಆಹಾರ ಮತ್ತು ಕೃಷಿ ಕ್ಷೇತ್ರದ ವೃತ್ತಿಪರರು, ವೈಜ್ಞಾನಿಕ ಸಂಸ್ಥೆಗಳು, ಪೌಷ್ಟಿಕ ತಜ್ಞರು, ನೀತಿ ನಿರೂಪಕರು, ಉದ್ಯಮಶೀಲ ನಾವೀನ್ಯಕಾರರು, ಶಿಕ್ಷಣ ಕೃಷಿ, ಬಳಕೆ ಮತ್ತು ಪ್ರಚಾರದಲ್ಲಿ ತೊಡಗಿರುವ ಮೇಳದಲ್ಲಿ ಭಾಗವಹಿಸುತ್ತಿದ್ದಾರೆ ಎಂದರು. ಸಿರಿಧಾನ್ಯಗಳು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಎಲ್ಲ ಅಂಶಗಳಿಗೆ ಪೂರಕವಾಗಿವೆ. ರೈತರ ವರಮಾನ ಹೆಚ್ಚಿಸುವ, ಜೀವನೋಪಾಯ ಕಲ್ಪಿಸುವ, ಸರ್ವರಿಗೂ ಆಹಾರ ಮತ್ತು ಪೌಷ್ಟಿಕಾಂಶಗಳನ್ನು ಒದಗಿಸುವ ಸಾಮರ್ಥ್ಯ ಸಿರಿಧಾನ್ಯಗಳಿಗಿದೆ. ಸಿಂಧೂ ನಾಗರಿಕತೆಯಲ್ಲಿ ಈ ಧಾನ್ಯಗಳ ಆರಂಭಿಕ ಪುರಾವೆಗಳು ದೊರೆತಿವೆ. ಭಾರತೀಯ ಸಿರಿಧಾನ್ಯಗಳು, ಪಾಕವಿಧಾನಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಜನಾಂದೋಲನ ವನ್ನಾಗಿ ಮಾಡಲು ಸರಕಾರದ ಜತೆ ನಾವು ಕೈಜೋಡಿಸಿದ್ದೇವೆ. ಸಿರಿಧಾನ್ಯಗಳಿಗೆ ಸಂಬಂಧಿಸಿದ ಜಾಗತಿಕ ಆಂದೋಲನ ಆಹಾರ ಭದ್ರತೆಯ ದಿಕ್ಕಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಕೃಷಿ ಏಕಸಂಸ್ಕೃತಿಯಾದರೆ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಸಿರಿಧಾನ್ಯಗಳು ಕೃಷಿ ಮತ್ತು ಆಹಾರ ವೈವಿಧ್ಯವನ್ನು ಹೆಚ್ಚಿಸಲು ಉತ್ತಮ ಮಾರ್ಗವಾಗಿದೆ ಎಂದು ತಿಳಿಸಿದರು.



ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಿರಿಧಾನ್ಯಗಳನ್ನು ಪ್ರದರ್ಶಿಸಲಾಯಿತು. ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್, ಜಿಕೆವಿಕೆಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ. ಬಿ.ಬೋರಯ್ಯ, ಅಖಿಲ ಭಾರತೀಯ ಸುಸಂಘಟಿತ ಸಂಶೋಧನಾ ಪ್ರಾಯೋಜನ (ಸಿರಿ ಧಾನ್ಯಗಳು) ಡಾ. ನಾಗರಾಜ ಇದ್ದರು.

> ಈ ಮೇಳದ ಮೂಲಕ ಸಿರಿಧಾನ್ಯಗಳು ಸಣ್ಣ ಉದ್ದಿಮೆಗಳು, ರೈತರು ಮತ್ತು ಸಮುದಾಯಗಳನ್ನು ಒಳಗೊಳ್ಳುವ ಮೂಲಕ ಉನ್ನತ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸುವ ಗುರಿ ಹೊಂದಲಾಗಿದೆ. ಈ ಮೇಳದಲ್ಲಿ 180ಕ್ಕೂ ಅಧಿಕ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಿದ್ದು, ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದ ನಡೆಯಲಿದೆ.
> - ಡಾ.ಎಸ್.ವಿ.ಸುರೇಶ್
> ಬೆಂಗಳೂರು ಕೃಷಿ ವಿವಿ ಕುಲಪತಿ

08-12-2023
Vishwa Vani Pg.11

ನಾಳೆಯಿಂದ ವಿಶ್ವ ಸಿರಿಧಾನ್ಯ ಮೇಳ

ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್‌ನಲ್ಲಿ 3 ದಿನ ಮೇಳ



ಬೆಂಗಳೂರು: ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷದ ಹಿನ್ನೆಲೆಯಲ್ಲಿ ಆರ್ಟ್ ಆಫ್ ಲಿವಿಂಗ್ ಅವರಣದಲ್ಲಿ ಡಿ.9 ರಿಂದ 11ರ ವರೆಗೆ ಜಾಗತಿಕ ಮಟ್ಟದ 'ಸಿರಿಧಾನ್ಯ ಮೇಳ' ಆಯೋಜಿಸಲಾಗುತ್ತಿದೆ ಎಂದು ಬೆಂ. ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್ ತಿಳಿಸಿದ್ದಾರೆ. ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಅವರಣದಲ್ಲಿ ಡಿ.9 ರಿಂದ 11 ರವರೆಗೆ ಜಾಗತಿಕ ಮಟ್ಟದ ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ ಆಯೋಜಿಸಲಾಗಿದೆ. ಶ್ರೀ ರವಿಶಂಕರ್ ಗುರೂಜಿ ಸಾನ್ನಿಧ್ಯದಲ್ಲಿ ಸಿರಿಧಾನ್ಯಗಳ ಚಿಂತನ, ಮಂಥನಕ್ಕೆ ಅಗತ್ಯ ಸಿದ್ಧತೆ ನಡೆಯುತ್ತಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ದೇಶ, ವಿದೇಶಗಳ ಸಿರಿಧಾನ್ಯ ಪರಿಣಿತರು ಭಾಗವಹಿಸಲಿದ್ದಾರೆ ಎಂದರು.

ಈ ಮೇಳದಲ್ಲಿ 180ಕ್ಕೂ ಅಧಿಕ ಮಳಿಗೆ ತೆರೆಯಲು ಅವಕಾಶ ಕಲ್ಪಿಸಿದ್ದು, ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದ ಏರ್ಪಡಿಸಲಾಗಿದೆ. ಸಿರಿಧಾನ್ಯಗಳ ಸಂಸ್ಕರಣೆ ಮಾಡುವ ಆಧುನಿಕ ಯಂತ್ರೋಪಕರಣ ತಂತ್ರಜ್ಞಾನವನ್ನು ಪ್ರದರ್ಶಿಸಲಾಗುತ್ತಿದೆ. ವಿಶ್ವಾದ್ಯಂತ 70ಕ್ಕೂ ಅಧಿಕ ರಾಷ್ಟ್ರಗಳು ಸಿರಿಧಾನ್ಯ ವರ್ಷಾಚರಣೆಗೆ ಬೆಂಬಲ ಸೂಚಿಸಿವೆ. ಡಿ.9ರಂದು ಸಚಿವ ಚಲುವರಾಯಸ್ವಾಮಿ ಮೇಳ ಉದ್ಘಾಟಿಸಲಿದ್ದಾರೆ. ಡಿ.10ರಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ ಕುರಿತು ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ ಎಂದರು.

ಶ್ರೀ ನೈಸರ್ಗಿಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ್ ಪ್ರಸಾದ್, ಜಿಕೆವಿಕೆಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಬಿ.ಬೋರಯ್ಯ ಇತರರಿದ್ದರು.

08-12-2023
Udaya Vani Pg.2

ವಿಶ್ವ ಸಿರಿಧಾನ್ಯ ಮೇಳ

ಬೆಂಗಳೂರು: ಕೃಷಿ ವಿವಿ ವತಿಯಿಂದ ಡಿ.9 ರಿಂದ 11ರವರೆಗೆ ನಗರದ ಆರ್ಟ್ ಆಫ್ ಲಿವಿಂಗ್‌ನಲ್ಲಿ ಜಾಗತಿಕ ಮಟ್ಟದ ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನಗಳ ಕಾಲ ನಡೆಯುವ ಜಾಗತಿಕ ಮಟ್ಟದ ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳವು ಶ್ರೀ ಶ್ರೀ ರವಿಶಂಕರ್ ಗುರೂಜಿ ಸಾನ್ನಿಧ್ಯದಲ್ಲಿ ನಡೆಯಲಿದೆ ಎಂದರು. ಈ ಮೇಳದಲ್ಲಿ 180ಕ್ಕೂ ಅಧಿಕ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದವನ್ನು ಆಯೋಜಿಸಲಾಗಿದೆ. ಸಿರಿಧಾನ್ಯಗಳ ಸಂಸ್ಕರಣೆ ಮಾಡುವ ಆಧುನಿಕ ಯಂತ್ರೋಪಕರಣ ತಂತ್ರಜ್ಞಾನವನ್ನು ಪ್ರದರ್ಶಿಸಲಾಗುತ್ತಿದೆ. 9ರಂದು ಈ ಮೇಳಕ್ಕೆ ಕೃಷಿ ಸಚಿವ ಚಲುವರಾಯಸ್ವಾಮಿ ಚಾಲನೆ ನೀಡಲಿದ್ದಾರೆ. ಡಿ.10ರಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ ಕುರಿತು ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆಂದರು

08-12-2023
Samyuktha Kar. Pg.3

ನಾಳೆಯಿಂದ ಮೂರು ದಿನ ವಿಶ್ವ ಸಿರಿಧಾನ್ಯ ಮೇಳ

ಆರ್ಟ್ ಆಫ್ ಲಿವಿಂಗ್, ಕೃಷಿ ವಿಶ್ವವಿದ್ಯಾಲಯದ ಸಹಯೋಗ । ಸಿರಿಧಾನ್ಯ ಬೆಳೆ ಕುರಿತು ಚಿಂತನ, ಮಂಥನ

■ ವಿಕ ಸುದ್ದಿಲೋಕ ಬೆಂಗಳೂರು

ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಹಿನ್ನೆಲೆಯಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ವಿಶ್ವ ಸಿರಿಧಾನ್ಯ ಮೇಳ'ವನ್ನು ಡಿ. 9ರಿಂದ 11ರವರೆಗೆ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದೆ.

ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್, ''ಸುರಕ್ಷಿತ, ಸುಸ್ಥಿರ ಮತ್ತು ಆರೋಗ್ಯಕರ ಭವಿಷ್ಯದ ಕಡೆಗೆ ಜನಾಂದೋಲನ ಕೊಂಡೊಯ್ಯಲು ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ ಆಯೋಜಿಸಲಾಗಿದೆ. ಶ್ರೀ ಶ್ರೀ ರವಿಶಂಕರ್ ಗುರೂಜಿ ಸಾನ್ನಿಧ್ಯದಲ್ಲಿ ನಡೆಯುವ ಮೇಳದಲ್ಲಿ ಸಿರಿಧಾನ್ಯಗಳ ಚಿಂತನ, ಮಂಥನ ನಡೆಯಲಿದ್ದು, ದೇಶ-ವಿದೇಶಗಳ ಪರಿಣತರು ಭಾಗವಹಿಸಲಿದ್ದಾರೆ,'' ಎಂದು ತಿಳಿಸಿದರು.

''ಕೃಷಿ ಸಚಿವ ಎಸ್. ಚೆಲುವರಾಯಸ್ವಾಮಿ ಈ ಮೇಳವನ್ನು ಉದ್ಘಾಟಿಸಲಿದ್ದಾರೆ. ಡಿ. 10 ರಂದು ನಡೆಯುವ ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ ಕುರಿತು ಅಂತಾರಾಷ್ಟ್ರೀಯ ಮಟ್ಟದ ವಿಚಾರಸಂಕಿರಣವನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಮೇಳದಲ್ಲಿ180ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗುತ್ತದೆ,''ಎಂದು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಸಿರಿಧಾನ್ಯಗಳನ್ನು ಪ್ರದರ್ಶಿಸಲಾಯಿತು.

ಶ್ರೀ ನೈಸರ್ಗಿಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ್ ಪ್ರಸಾದ್ ಮಾತನಾಡಿ, ''ಭಾರತೀಯ ಸಿರಿಧಾನ್ಯಗಳು, ಪಾಕ ವಿಧಾನಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಜನಾಂದೋಲನವನ್ನಾಗಿ ಮಾಡಲು ಸರಕಾರದ ಜತೆ ಕೈಜೋಡಿಸಿದ್ದೇವೆ,'' ಎಂದು ಹೇಳಿದರು.

ಜಿಕೆವಿಕೆಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ. ಬಿ.ಬೋರಯ್ಯ, ಅಖಿಲ ಭಾರತೀಯ ಸುಸಂಘಟಿತ ಸಂಶೋಧನಾ ಪ್ರಾಯೋಜನ ಪ್ರಾಧ್ಯಾಪಕ ಡಾ. ನಾಗರಾಜ ಟಿ.ಇ., ಉದಯಕುಮಾರ ಕೊಳ್ಳಿಮಠ ಉಪಸ್ಥಿತರಿದ್ದರು.

08-12-2023
Vijaya Kar. Pg.10

Kadalekai Parishe begins this weekend

Bengaluru's fabled peanut fair is back, with over 300 shops this time

GEETHANJALI G AND TINI SARA ANIEN
TEAM METROLIFE

Bengaluru's Kadlekai Parishe or groundnut fair will kick off this weekend. The annual event, a highlight of the city's calendar, is held after the first yield of the crop.

The stalls of the Parishe will line the stretch between 3rd Cross, N R Colony and Ramakrishna Matha. There will also be stalls selling household items, textiles, and fast food.

One can expect to sample different varieties of *kadalekai* such as Salem, Samrat, Badami, Sana and Dappa *kai* at the fair.

Vendors from across the city are busy setting up their stalls. Valarmani, a vendor from Yeshwantpur, has brought around 45 bags of the legume. "Each bag weighs around 30 kg. We will hopefully be able to sell it all for a good profit," she said. A vendor who came with his family is hopeful that there will be more visitors this year. "We are expecting a larger footfall this year. We have brought several types of *kadalekai* from Yeshwantpur," he added.


Out of the 700-odd stalls, 350 will be selling groundnuts, said former mayor B S Sathyanarayana, who is also a member of the Kadalekai Parishe committee. The fair draws an estimated 14 lakh people every year. "There will be around 25 police towers at the event to ensure law and order is maintained," he said. He added that there will also be sellers from Tamil Nadu and Andhra Pradesh, apart from farmers from villages around Bengaluru.

Citizen's requests

The Heritage Basavanagudi Residential Welfare Forum and other citizens have appealed to the Bengaluru Traffic Police and City Police, to ensure there is enough space for movement of emergency services (ambulance and fire engine), says Guruprasad R K, secretary of the Forum. This was not done last year, and caused multiple issues, he added.

This year, a number of citizen groups and NGOs, like Youth for Parivarthan, Basavanagudi Kannada Balaga and Prathibimba Trust have taken interest "to ban the use of plastic bags" and promote the use of cloth bags at the event, says Satish Urala. Satish is a resident of Basavanagudi, and president of Appu Balaga Association, a fan's club of late actor Puneeth Rajkumar. "Previously, the Parishe would only be for around two days but nowadays it extends to three or more," he added. Every year, the association offers rugs and food to the women vendors at the Parishe.

Citizens have also appealed to authorities to restrict the sale of toy whistles, said Satyalaxmi Rao, a civic activist from Basavanagudi.



A vendor setting up her stall at the upcoming Kadalekai Parishe at Basavanagudi. DH PHOTO / B K JANARDHAN

LOOKING BACK

Legend has it that before Bengaluru became the city it is now, villages near Basavanagudi were dotted with several groundnut cultivation farms. The farms would get damaged by a raging bull, just when they were ready for harvest. To protect the groundnut harvest, farmers would pray to Basava (Nandi) and offer their first crop to him.

A Nandi idol was found in the area and Kempegowda dedicated a temple to 'Dodda Basava' on the Basavanagudi hill and installed the idol there. This is where the Bull Temple is now.

The Parishe is observed to celebrate the first yield of the groundnut crop every year. Most Karnataka farmers arrive at the Bull Temple in Bengaluru seeking blessings for a good harvest. Special puja and prayers are offered at the temple.

PARKING ARRANGEMENTS

Police personnel confirmed that parking arrangements have been made at the APS College premises, and at Kohinoor ground, near Ramakrishna Matha.

ON THE SIDE

A premiere of the documentary 'Parisheya Parichaya' by Maya Films will be held on December 11, 5.30 pm at Indian Institute of World Culture, B P Wadia Road, Basavanagudi. The film traces the history of the Parishe, one of Bengaluru's oldest cultural fairs. There will also be a live folk dance performance, 'Nandi Dwaja Kunitha'.

08-12-2023
Deccan Herald Pg.3A



The water pumping system at Taipadar village in Bastar, Chhattisgarh.

IISc researcher springs irrigation surprise in Bastar village

BENGALURU, DHNS: The efforts to address irrigation scarcity in Chhattisgarh, led by an Indian Institute of Science (IISc) researcher over the 10 years, have resulted in a sustainable water pumping system that requires zero electricity in a village in Bastar district.

The project in Taipadar village, led by Punit Singh, Associate Professor at the Centre for Sustainable Technologies, IISc, uses low-head check dams and cascades of such dams along rivers, with turbine pumps installed to pump water without any electricity.

The turbine uses about 90% of the river water flow at low head to generate power, specifically torque and speed, which is used to drive standard submersible multi-stage pumps. "The novelty lies in the precise design of the system. Depending on specific site conditions, where the water head ranges from 2-4m, the objective is to lift and transport water to different elevations, usually between 15 and 25m, or even up to 30m as required," IISc said.

Singh started working on developing turbine pumps for electricity generation during his PhD at the Karlsruhe Institute of Technology, Germany. On his return to India in 2009, he pursued the possibility of deploying ram pumps in Chhattisgarh. The KSB Pumps Trust in Germany sponsored two turbine pumps with power generation capabilities. Singh invested about Rs 50 lakh in a ram pump sourced from Rife, USA, and in the three-year-long construction work.

The project holds promise for a large part of southern Chhattisgarh's tribal-majority areas that lack reservoir-based irrigation. It was supported by a collaboration of IISc's Foundation for Science Innovation and Development and the Chhattisgarh Water Resources Department.

Over the next few years, the collaboration will focus on installing one or two pumps on each dam, along with piping, storage, and canal networks. "Building 25% is the first target, and then, based on the success, it could be scaled up to all the 400 or more dams," Singh said. Each project will irrigate about 100-150 acres, depending on the conditions and design of turbine and pumps. It will free farmers near banks from using groundwater, allowing levels to rise. It is capable of being reproduced in large parts of India that offer perennial water flow, he said.

08-12-2023
Deccan Herald Pg.6

ಡಿ. 13 ಸಿರಿಧಾನ್ಯ ಪಾಕ ಸ್ಪರ್ಧೆ

ಮೈಸೂರು: ಅಂತರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳ 2024 ರ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಸಿರಿಧಾನ್ಯ ಪಾಕಸ್ಪರ್ಧೆಯನ್ನು ಕೃಷಿ ಇಲಾಖೆಯಿಂದ ಡಿ.13ರಂದು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ. ಅಭ್ಯರ್ಥಿಗಳು ತಮ್ಮ ಭಾವ ಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯ ಬೇಕಾಗುವ ಸಾಮಾಗ್ರಿಗಳು, ತಯಾರಿಸಲು ಬೇಕಾಗುವ ಸಮಯ ಹಾಗೂ ತಯಾರಿಸುವ ವಿಧಾನದ ಸಂಕ್ಷಿಪ್ತ ಮಾಹಿತಿಯೊಂದಿಗೆ ಅರ್ಜಿಯನ್ನು ಡಿ.11 ರ ಮಧ್ಯಾಹ್ನ 12 ಗಂಟೆಯೊಳಗೆ ಇ-ಮೇಲ್ ವಿಳಾಸ jdamysuru@gmail.com ಅಥವಾ ಖುದ್ದಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಸಾರ್ವಜನಿಕ ಕಚೇರಿಗಳ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ. ಸಹಾಯಕ ಕೃಷಿ ನಿರ್ದೇಶಕರ ದೂ.ಸಂಖ್ಯೆ 8277933105 ಅನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

08-12-2023
Hosa Digantha Pg.10

ಸಂಗತ

ಬದುಕಬೇಕು ಹೆಚ್ಚೇನು, ಜೊತೆಗೆ ಮಾನವನೂ

ಜೇನುಹುಳುಗಳನ್ನು ಕೊಲ್ಲದೆ ಸ್ಥಳಾಂತರಿಸುವ ಮೂಲಕ ಅವುಗಳ ಸಂರಕ್ಷಣೆಯ ಜೊತೆಗೆ ಮಾನವನ ಮೇಲೆ ಅವು ದಾಳಿ ಮಾಡುವುದನ್ನೂ ತಡೆಗಟ್ಟಬಹುದು

• ಕೆ.ಟಿ.ವಿಜಯಕುಮಾರ್

ರಾಜ್ಯದಲ್ಲಿ ಹೆಜ್ಜೇನು ದಾಳಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಮೇಲುಕೋಟೆ ಜಾತ್ರೆಗೆ ಬಂದಿದ್ದ 80ಕ್ಕೂ ಹೆಚ್ಚು ಭಕ್ತರು ಹಾಗೂ ಹೂವಿನಹಡಗಲಿಯ ಶಾಲೆಯೊಂದರ ವಿದ್ಯಾರ್ಥಿಗಳು ಹೆಜ್ಜೇನು ದಾಳಿಯಿಂದ ಆಸ್ಪತ್ರೆ ಸೇರಬೇಕಾಯಿತು. ಚನ್ನಗಿರಿ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ತಲಾ ಒಬ್ಬರು ಹೆಜ್ಜೇನು ದಾಳಿಗೆ ಬಲಿಯಾಗಿದ್ದು, ಜನರಲ್ಲಿ ಆತಂಕಕ್ಕೆ ಕಾರಣವಾಗಿದೆ. ಹೆಜ್ಜೇನುಗಳಿಂದ ರಕ್ಷಿಸಿಕೊಳ್ಳುವ ಮಾರ್ಗಗಳ ಬಗ್ಗೆ ಯೋಚಿಸುವಂತೆ ಮಾಡಿದೆ.

ಜೇನು ಸಂತತಿಯಲ್ಲಿ ಹೆಜ್ಜೇನು, ಕಡ್ಡಿಜೇನು, ತುಡುವೆ, ಮೆಲ್ಲಿಫೆರಾ, ಮುಜಂಟಿ ಎಂಬ ಐದು ಬಗೆಯ ಪ್ರಭೇದಗಳಿವೆ. ತುಡುವೆ, ಮೆಲ್ಲಿಫೆರಾ ಮತ್ತು ಮುಜಂಟಿ ಜೇನು ಕುಟುಂಬಗಳನ್ನು ಪೆಟ್ಟಿಗೆಗಳಲ್ಲಿಟ್ಟು ಸಾಕಬಹುದು. ಆದರೆ ಹೆಜ್ಜೇನು ಮತ್ತು ಕಡ್ಡಿಜೇನುಗಳು ಅಲೆಮಾರಿಗಳಾಗಿದ್ದು, ಇವುಗಳನ್ನು ಸಾಕುವುದು ಅಸಾಧ್ಯ. ಜೇನುಹುಳುಗಳು ನಡೆಸುವ ಪರಾಗಸ್ಪರ್ಶದಿಂದ ಸಸ್ಯಗಳ ವಂಶಾಭಿವೃದ್ಧಿಗೆ ಅನುಕೂಲ ಆಗುತ್ತದೆ ಮತ್ತು ಬೆಳೆಗಳ ಇಳುವರಿ ವೃದ್ಧಿಗೂ ಸಹಕಾರಿ. ಹೆಜ್ಜೇನು ಕುಟುಂಬಗಳು ಮರದ ರೆಂಬೆ, ಟೆಲಿಫೋನ್ ಟವರ್, ಮನೆಗಳ ಸಜ್ಜಾ, ಸೇತುವೆಗಳ ಮೇಲೆ ಹೆಚ್ಚಾಗಿ ಗೂಡುಗಳನ್ನು ಕಟ್ಟಿ ಮೂರ್ನಾಲ್ಕು ತಿಂಗಳು ನೆಲೆಯೂರುತ್ತವೆ. ಒಂದು ಗೂಡಿನಿಂದ 15 ಕೆ.ಜಿ. ಗೂ ಹೆಚ್ಚು ಜೇನುತುಪ್ಪವನ್ನು ಕೊಯ್ದು ಮಾಡುವ ಸೋಲಿಗ, ಜೇನುಕುರುಬ, ಕಾಡುಕುರುಬ, ಬೇಡ, ಸಿದ್ದಿ ಜನಾಂಗದವರಿಗೆ ಹೆಜ್ಜೇನು ತುಪ್ಪ ಸಂಗ್ರಹಿಸುವಿಕೆ ಪರ್ಯಾಯ ಜೀವನೋಪಾಯದ ಮಾರ್ಗ. ಹೆಜ್ಜೇನಿನ ತುಪ್ಪ ಅಷ್ಟೇ ರುಚಿಕರ ಮತ್ತು ಆರೋಗ್ಯಕರ.

ಹೆಜ್ಜೇನುಗಳು ವಿನಾಕಾರಣ ಯಾರ ಮೇಲೂ ದಾಳಿ ಮಾಡುವುದಿಲ್ಲ. ಗೂಡಿಗೆ ಕಲ್ಲು ಎಸೆದರೆ, ಹಕ್ಕಿಗಳು ತಾಕಿದರೆ, ಸಣ್ಣ ಮಟ್ಟದ ಹೊಗೆಯಾಡಿದರೆ ಅವು ದಾಳಿಗೆ ಸಜ್ಜಾಗುತ್ತವೆ. ಅವು ಕುಟುಕಿದಾಗ ಬರುವ ವಿಷವು ಮಾನವನ ದೇಹ ಸೇರಿದಾಗ ಅಲರ್ಜಿಯಿಂದ ಕೆಂಪಾಗುವುದು, ಕಡಿತ ಮತ್ತು ಊತ ಸಾಮಾನ್ಯ. ತಲೆ ಸುತ್ತುವುದು, ಉಸಿರಾಟದಲ್ಲಿ ತೊಂದರೆ, ಎದೆಬಡಿತದಲ್ಲಿ ಏರಿಕೆ, ರಕ್ತದೊತ್ತಡದಲ್ಲಿ ಏರುಪೇರಿನಂತಹ ಲಕ್ಷಣಗಳು ಕೆಲವರಲ್ಲಿ ಕಾಣಬಹುದು. ಹೆಜ್ಜೇನು ದಾಳಿ ಮಾಡಿದಾಗ ಜೋರಾಗಿ ಹೊಗೆ ಹಾಕಿದರೆ ಅವು ಹೆದರಿ ಜಾಗ ಖಾಲಿ ಮಾಡುತ್ತವೆ. ಭಯದಿಂದ ಓಡುವ ಬದಲು, ನಿಂತ ಜಾಗದಲ್ಲೇ ಬೋರಲಾಗಿ ಅಲುಗಾಡದಂತೆ ಮಲಗಬೇಕು. ಜೇನುಹುಳು ಕುಟುಕಿದರೆ, ಮೊದಲಿಗೆ ಆ ಮುಳ್ಳನ್ನು ತೆಗೆಯಬೇಕು. ಇಲ್ಲದಿದ್ದರೆ ಆ ಮುಳ್ಳು ಮತ್ತು ಅದಕ್ಕಂಟಿದ ವಿಷವು ಬೇರೆ ಹೂರಾರು ಹುಳುಗಳು ಕುಟುಕುವಂತೆ ಪ್ರೇರೇಪಿಸುತ್ತವೆ. ಜೇನು ಕುಟುಕಿದ ಜಾಗವನ್ನು ಯಾವುದಾದರೂ ಸಸ್ಯದ ಎಲೆಯ ರಸ, ನೀರು ಅಥವಾ ಎಂಜಲಿನಿಂದ ಉಜ್ಜಿದಾಗ ಬೇರೆ ಹುಳುಗಳನ್ನು ಆಕರ್ಷಿಸುವುದನ್ನು ತಡೆಯಬಹುದು. ನಂತರ ಮಂಜುಗಡ್ಡೆ ಅಥವಾ ಕ್ಯಾಲಮೈನ್ ಕ್ರೀಂ ಲೇಪಿಸುವುದರಿಂದ ಊತ ಕಮವ ಆಗುತ್ತದೆ. ದಾಳಿಯ ಪ್ರಮಾಣ ತೀವ್ರವಾದಾಗ ತುರ್ತಾಗಿ ವೈದ್ಯರನ್ನು ಸಂಪರ್ಕಿಸಬೇಕು.

ಹೆಜ್ಜೇನು ವಾಸಸ್ಥಾನದಲ್ಲಿ ಹೆಬ್ಬು ನಿಗಾ ವಹಿಸಬೇಕು. ಸುಗಂಧದ್ರವ್ಯ ಬಳಸಿದಾಗ ಹೆಜ್ಜೇನು ಗೂಡುಗಳ ಸಮೀಪ ತೆರಳಬಾರದು. ಸುತ್ತಮುತ್ತ ಸಭೆ ಸಮಾರಂಭ ಹಮ್ಮಿಕೊಳ್ಳುವುದಿದ್ದರೆ ಜೇನುಕೃಷಿಕರಿಂದ ಆ ಗೂಡುಗಳನ್ನು ಸ್ಥಳಾಂತರ ಸಬೇಕು. ಗೂಡುಗಳಿಗೆ ಕೀಟನಾಶಕ ಸಿಂಪಡಿಸಬಾರದು. ಬೆಂಕಿ ಹಚ್ಚಬಾರದು. ಹೆಜ್ಜೇನಿನ ಸ್ಥಳಾಂತರಕ್ಕೆ ಮೂರು ಮಾರ್ಗಗಳಿವೆ. ಅವುಗಳ ಗೂಡನ್ನು (ರಾಡೆ) ಕತ್ತರಿಸಿ ಹೊಗೆ ಕೊಟ್ಟರೆ ಹೆಜ್ಜೇನುಗಳು ಜಾಗ ಖಾಲಿ ಮಾಡುತ್ತವೆ. ಎರಡನೆಯದಾಗಿ, ರಾಡೆಯನ್ನು ಕತ್ತರಿಸಿ ಮರದ ಹಲಗೆಗೆ ಕಟ್ಟಿ ಮೂಲ ಸ್ಥಳದಲ್ಲಿಟ್ಟರೆ, ಜೇನುಹುಳುಗಳು ಅದರ ಮೇಲೆ ಕೂತಾಗ ಸುರಕ್ಷಿತ ಪ್ರದೇಶಗಳಿಗೆ ವರ್ಗಾಯಿಸಬಹುದು. ಕೊನೆಯದಾಗಿ, ರಾತ್ರಿ ಸಣ್ಣ ರಂಧ್ರದ ಚೀಲದಿಂದ ಜೇನುಹುಳುಗಳನ್ನು ಹಿಡಿದು ದೂರದ ಸ್ಥಳಕ್ಕೆ ಬಿಡಬಹುದು. ಜೇನುಗೂಡು ಬಿಡಿಸುವಾಗ ರಕ್ಷಣಾ ಕವಚ, ಹೊಗೆ ತಿದಿ, ಪ್ರಥಮ ಚಿಕಿತ್ಸಾ ಸಾಮಗ್ರಿಗಳನ್ನು ತಪ್ಪದೇ ಕೊಂಡೊಯ್ಯಬೇಕು. ಗೂಡು ಕಿತ್ತ ಖಾಲಿ ಜಾಗಕ್ಕೆ ಯಾವುದಾದರೂ ರಾಸಾಯನಿಕ ಸಿಂಪಡಣೆ ಅಥವಾ ಗೋಡೆ ಬಣ್ಣ ಹಚ್ಚುವುದರಿಂದ ಮತ್ತೆ ಜೇನುಗಳು ಅಲ್ಲಿಗೆ ಬರುವುದನ್ನು ತಡೆಯಬಹುದು.



ನವೆಂಬರ್‌ನಿಂದ ಏಪ್ರಿಲ್‌ವರಗಿನ ಅವಧಿಯಲ್ಲಿ ಹೆಜ್ಜೇನುಗಳು ನಗರಗತ್ತ ಹೆಚ್ಚು ವಲಸೆ ಬರುತ್ತವೆ. ಕಟ್ಟಡಗಳ ಸಜ್ಜಾಗಳಿಗೆ ಮುಳ್ಳುಗಳ ಬಲೆ ಅಥವಾ ಮೆಶ್‌ಗಳನ್ನು ಹಾಕಿದ್ದರೆ ಗೂಡುಗಳನ್ನು ಕಟ್ಟಲು ಸ್ಥಳಾವಕಾಶವಿಲ್ಲದೆ ಮರಗಳನ್ನು ಆಶ್ರಯಿಸುತ್ತವೆ. ಕೀಟಗಳು ಒಳನುಸುಳದಂತೆ ಕಿಟಕಿಗಳಿಗೆ ಮೆಶ್ ಹಾಕಿಸುವುದು, ವಿದ್ಯುತ್ ಬೇಲಿಯನ್ನು ನೇರವಾಗಿ ಗೂಡಿನ ಮೇಲ್ಬಿಳಬದಂತೆ ನೋಡಿಕೊಳ್ಳುವುದು ಸೂಕ್ತ. ಕಾಡುಮೇಡು ನಾಶವಾದಾಗ ಹೆಜ್ಜೇನುಗಳು ಎತ್ತರದ ಕಟ್ಟಡ ಗಳನ್ನು ಆಶ್ರಯಿಸಲು ನಗರಗಳಿಗೆ ವಲಸೆ ಬರುವುದು ಅನಿವಾರ್ಯ. ಮಾನವ ಮತ್ತು ಹೆಜ್ಜೇನಿನ ನಡುವಿನ ಸಂಘರ್ಷ ವಿಪರೀತಗೊಂಡಿದೆ. ಆದರೆ ನೆನಪಿರಲಿ, ಜೇನುಹುಳುಗಳು ಭೂಮಿಯಿಂದ ನಿರ್ನಾಮಿಸಿದರೆ ಅವು ಸಸ್ಯಗಳಲ್ಲಿ ನಡೆಸುವ ಪರಾಗಸ್ಪರ್ಶ ಕ್ರಿಯೆ ಕುಂಠಿತಗೊಂಡು ಆಹಾರ ಪದಾರ್ಥಗಳ ಉತ್ಪಾದನೆ ಗಣನೀಯವಾಗಿ ಇಳಿಮುಖವಾಗುತ್ತದೆ.

ಜೇನುಹುಳುಗಳನ್ನು ಕೊಲ್ಲದೆ ಸ್ಥಳಾಂತರಿಸುವ ಮೂಲಕ ಅವುಗಳನ್ನು ಸಂರಕ್ಷಿಸುವುದರ ಜೊತೆಗೆ ಅವುಗಳಿಂದಾಗುವ ದಾಳಿಯನ್ನೂ ತಡೆಗಟ್ಟಬಹುದು. ಪ್ರಕೃತಿಯೊಂದಿಗಿನ ಸಹಬಾಳ್ವೆಯ ತತ್ವವನ್ನು ನಾವು ಅಳವಡಿಸಿಕೊಂಡು ಸಾಗುವ ಸೂತ್ರದಲ್ಲಿ, ಭೂಮಿಯ ಮೇಲೆ ಸರ್ವ ಜೀವಿಗಳೂ ಉಳಿಯುವ ಮಾರ್ಗವಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕೃಷಿ ವಿಶ್ವವಿದ್ಯಾಲಯ ಜಕ್ಕೂರು, ಬೆಂಗಳೂರು

...for selection of news under the PRB Act): Sudesh

08-12-2023
Praja Vani Pg.8

ನಾಳೆಯಿಂದ ಕಡಲೆಕಾಯಿ ಪರಿಷೆ

ಬಸವನಗುಡಿ ಸುತ್ತಮತ್ತ 13ರವರೆಗೆ ಮಾರ್ಗ ಬದಲಾವಣೆ | ಪೊಲೀಸರ ಕ್ರಮ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಸವನಗುಡಿಯ ದೊಡ್ಡಬಸವಣ್ಣ ಮತ್ತು ದೊಡ್ಡಗಣಪತಿ ದೇವಸ್ಥಾನದಲ್ಲಿ 9ರಿಂದ 13ರವರೆಗೆ ಐತಿಹಾಸಿಕ ಕಡಲೆಕಾಯಿ ಪರಿಷೆ ಆಯೋಜಿಸಲಾಗಿದ್ದು, ಪೊಲೀಸರು ಆ ಭಾಗದಲ್ಲಿ ವಾಹನ ಸಂಚಾರ ವ್ಯವಸ್ಥೆಯಲ್ಲಿ ಕೆಲ ತಾತ್ಕಾಲಿಕ ಬದಲಾವಣೆ ಮಾಡಿದ್ದಾರೆ.

ಲಾಲ್‌ಬಾಗ್ ಪಶ್ಚಿಮ ದ್ವಾರ ಕಡೆಯಿಂದ ವಾಣಿ ವಿಲಾಸ ರಸ್ತೆ ಮುಖಾಂತರ ಮತ್ತು 5ನೇ ಮುಖ್ಯರಸ್ತೆ ಚಾಮರಾಜಪೇಟೆ ಹಾಗೂ ಗಾಂಧಿಬಜಾರ್ ಮುಖ್ಯ ರಸ್ತೆ ಕಡೆಯಿಂದ ಬುಲ್‌ಟೆಂಪಲ್ ಮುಖಾಂತರ ಹನುಮಂತನಗರದ ಕಡೆಗೆ ಸಂಚರಿಸುವ ವಾಹನಗಳು ಬುಲ್‌ಟೆಂಪಲ್ ರಸ್ತೆಯ ರಾಮಕೃಷ್ಣ ಆಶ್ರಮ ವೃತ್ತದಲ್ಲಿ ಬಲತಿರುವು ಪಡೆದು, ಹಯವದನರಾವ್ ರಸ್ತೆಯಲ್ಲಿ ಸಾಗಿ, ಗವಿಪುರ 3ನೇ ಆಡ್ಡರಸ್ತೆಯ ಮೂಲಕ ಮುಂದೆ ಸಾಗಿ ಮೌಂಟ್ ಜಾಯ್ ರಸ್ತೆ ಮೂಲಕ ತೆರಳಬೇಕು.

ಆರ್.ವಿ. ಟೀಚರ್ಸ್ ಕಾಲೇಜ್ ಜಂಕ್ಷನ್ ಕಡೆಯಿಂದ ಟ್ರಿನಿಟಿ ಆಪ್ಪತ್ರೆ ರಸ್ತೆ ಮತ್ತು ಕೆ.ಆರ್. ರಸ್ತೆಯಲ್ಲಿ ಕಹಳೆಬಂಡೆ ರಸ್ತೆ ಮೂಲಕ ಹನುಮಂತನಗರ ಕಡೆಗೆ ಹೋಗುವ ವಾಹನಗಳು ಠಾಗೋರ್ ವೃತ್ತದಲ್ಲಿ (ಮಾರುಕಟ್ಟೆ ರಸ್ತೆ-ಕಹಳೆಬಂಡೆ ರಸ್ತೆ ಜಂಕ್ಷನ್) ಬಲತಿರುವು ಪಡೆದು ಗಾಂಧಿಬಜಾರ್ ಮುಖ್ಯರಸ್ತೆ ಮೂಲಕ ರಾಮಕೃಷ್ಣ ಆಶ್ರಮ ಜಂಕ್ಷನ್‌ನಿಂದ ಹಯವದನರಾವ್ ರಸ್ತೆಯಲ್ಲಿ ಗವಿಪುರ ಎಕ್ಸ್‌ಟೆನ್ಷನ್ 3ನೇ ಆಡ್ಡರಸ್ತೆಯಲ್ಲಿ ಮುಂದೆ ಸಾಗಿ, ಮೌಂಟ್ ಜಾಯ್ ರಸ್ತೆಯ ಮೂಲಕ ತೆರಳಬೇಕು.

ತ್ಯಾಗರಾಜನಗರ/ ಬನಶಂಕರಿ ಕಡೆಯಿಂದ 5ನೇ ಮುಖ್ಯರಸ್ತೆ ಎನ್.ಆರ್. ಕಾಲನಿ ರಸ್ತೆಯಲ್ಲಿ ಚಾಮರಾಜಪೇಟೆ ಕಡೆ ಸಾಗುವ ವಾಹನಗಳು ಕಾಮತ್ ಯಾತ್ರಿ ನಿವಾಸ ಬಳಿ ಎಡ ತಿರುವು ಪಡೆದು, ಬಿಎಂಎಸ್ ಕಾಲೇಜ್ ಹಾಸ್ಟೆಲ್ ರಸ್ತೆಯಲ್ಲಿ ಸಾಗಿ, ಕತ್ತರಿಗುಪ್ಪೆ ರಸ್ತೆ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ನಾರಾಯಣಸ್ವಾಮಿ ಸರ್ಕಲ್‌ನಲ್ಲಿ ಕೆ.ಜಿ. ನಗರ ಮುಖ್ಯರಸ್ತೆ ಅಥವಾ ಹಯವದನರಾವ್ ರಸ್ತೆಯಲ್ಲಿ ಸಾಗಿ ರಾಮಕೃಷ್ಣ ಆಶ್ರಮ ಮೂಲಕ ತೆರಳಬೇಕು.



ಪರಿಷೆ ಆರಂಭಕ್ಕೂ ಮುನ್ನವೇ ಕಡಲೆಕಾಯಿ ಖರೀದಿಯಲ್ಲಿ ತೊಡಗಿರುವ ಯುವತಿಯರು.

ಎಲ್ಲೆಲ್ಲಿ ಪಾರ್ಕಿಂಗ್ ವ್ಯವಸ್ಥೆ?

- ಎನ್.ಆರ್. ಕಾಲನಿಯ ಎಪಿಎಸ್ ಕಾಲೇಜು ಮೈದಾನ
- ಆಶ್ರಮ ಜಂಕ್ಷನ್‌ನ ಹಯವದನರಾವ್ ರಸ್ತೆಯ ಕೊಹಿನೂರು ಆಟದ ಮೈದಾನ
- ಬಸವನಗುಡಿ ರಸ್ತೆಯ ಉದಯಭಾನು ಆಟದ ಮೈದಾನ

08-12-2023
Praja Vani Pg.3

ಮಹಿಳಾ ಸಬಲೀಕರಣಕ್ಕೆ ಒತ್ತಾಸೆಯಾಗುವ ನಮೋ ಡ್ರೋನ್ ದೀದಿ

'ನಮೋ ಡ್ರೋನ್ ದೀದಿ' ಯೋಜನೆಯು ಗ್ರಾಮೀಣ ಮಹಿಳೆಯರ ಕೈಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಇರಿಸುವ ಮೂಲಕ ನಮ್ಮ ಕೃಷಿ ಪದ್ಧತಿಗಳನ್ನು ಆಧುನೀಕರಿಸುತ್ತದೆ ಮತ್ತು ಕೃಷಿ ಉತ್ಪಾದಕತೆಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸುತ್ತದೆ. ಇದು ಮಹಿಳೆಯರನ್ನು ಗ್ರಾಮೀಣ ಆರ್ಥಿಕತೆಯ ಕೇಂದ್ರಬಿಂದುವನ್ನಾಗಿ ಮಾಡುತ್ತದೆ ಮತ್ತು ಹೊಸ ಕೃಷಿ ಕ್ರಾಂತಿಯನ್ನು ಮುನ್ನಡೆಸುತ್ತದೆ.



ಮಹಿಳಾಶಕ್ತಿ

ಡಾ.ಮನ್ಸುಖ್ ಮಾಂಡವಿಯಾ
vveditoped@gmail.com

ಒಂದು ಬಲಿಷ್ಠ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರದ ನಿರ್ಮಾಣಕ್ಕೆ ಮಹಿಳೆಯರ ಸಬಲೀಕರಣವು ನಿಸ್ಸಂದೇಹವಾಗಿಯೂ ಅತ್ಯಂತ ಮುಖ್ಯವಾದುದು. ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದಾಗ ಮತ್ತು ಗ್ರಾಮೀಣ ಸಮೃದ್ಧಿಗೆ ಕೊಡುಗೆ ನೀಡಿದಾಗ, ಅದು ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿ ಅವರು 2023ರ ನವೆಂಬರ್ 30ರಂದು 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯಲ್ಲಿ ಫಲಾನುಭವಿಗಳೊಂದಿಗಿನ ಸಂವಾದದ ಸಂದರ್ಭದಲ್ಲಿ 'ನಮೋ ಡ್ರೋನ್ ದೀದಿ' ಯೋಜನೆಯನ್ನು ಘೋಷಿಸಿದರು. ಕೃಷಿ ಉದ್ದೇಶಗಳಿಗಾಗಿ ರೈತರಿಗೆ ಬಾಡಿಗೆ ಸೇವೆಗಳನ್ನು ಒದಗಿಸಲು 15,000 ಮಹಿಳಾ ಸ್ವಸಹಾಯ ಗುಂಪುಗಳಿಗೆ (ಎಸ್‌ಎಚ್‌ಜಿ) ಡ್ರೋನ್‌ಗಳನ್ನು ಒದಗಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಗ್ರಾಮೀಣ ಸಮೃದ್ಧಿಯ ಹೊಸ ಯುಗವನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸಲು ತಾಂತ್ರಿಕ ನಾವೀನ್ಯತೆಯನ್ನು ಬಳಸಿಕೊಳ್ಳುವ ಅತ್ಯುತ್ತಮ ಉದಾಹರಣೆ ಇದಾಗಿದೆ. ಈ ಬಹುಮುಖಿ ಯೋಜನೆಯು ಗ್ರಾಮೀಣ ಮಹಿಳೆಯರ ಕೈಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಇರಿಸುವ ಮೂಲಕ ನಮ್ಮ ಕೃಷಿ ಪದ್ಧತಿಗಳನ್ನು ಆಧುನೀಕರಿಸುತ್ತದೆ ಮತ್ತು ಕೃಷಿ ಉತ್ಪಾದಕತೆಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸುತ್ತದೆ. ಇದು ಮಹಿಳೆಯರನ್ನು ಗ್ರಾಮೀಣ ಆರ್ಥಿಕತೆಯ ಕೇಂದ್ರಬಿಂದುವನ್ನಾಗಿ ಮಾಡುತ್ತದೆ ಮತ್ತು ಹೊಸ ಕೃಷಿ ಕ್ರಾಂತಿಯನ್ನು ಮುನ್ನಡೆಸುತ್ತದೆ. ಈ ಯೋಜನೆಯು ದೇಶದ ಯುವ, ರೋಮಾಂಚಕ, ಕ್ರಿಯಾಶೀಲ ಮತ್ತು ಉತ್ಸಾಹಿ ನವೋದ್ಯಮಗಳು ಉದಯೋನ್ಮುಖ 'ಡ್ರೋನ್ ಏರೋನಾಟಿಕ್' ಕ್ಷೇತ್ರಕ್ಕೆ ಪ್ರವೇಶಿಸಲು ಹೊಸ ಅವಕಾಶಗಳನ್ನು ತೆರೆಯುತ್ತದೆ.

ಎಲೆಗೆ ಮೇಲೆ ಸಿಂಪಡಿಸಬಹುದಾದ 'ನ್ಯಾನೊ ಯೂರಿಯಾ' ಮತ್ತು 'ನ್ಯಾನೊ ಡಿಎಪಿ'ಯಂಥ ಸಣ್ಣ ದ್ರವರೂಪದ ಗೊಬ್ಬರಗಳ ಆವಿಷ್ಕಾರವು, ಪರಿಣಾಮಕಾರಿ ರಸಗೊಬ್ಬರ ವ್ಯವಸ್ಥೆಯ ಅಭಿವೃದ್ಧಿಯ ಆಗತ್ಯವನ್ನು ಹೆಚ್ಚಿಸಿದೆ. 'ಸ್ವಸಹಾಯ ಗುಂಪು'ಗಳ ಮಹಿಳಾ ಫೈಲಟ್‌ಗಳ ಕೈಗೆ ಡ್ರೋನ್ ತಂತ್ರಜ್ಞಾನವನ್ನು ಇರಿಸುವ ಇಂಥ ಅದ್ಭುತ ಪರಿಕಲ್ಪನೆಯನ್ನು ಕಲ್ಪಿಸಿಕೊಳ್ಳುವುದು ಪ್ರಧಾನಿಯವರಿಗೆ ಮಾತ್ರ ಸಾಧ್ಯವಾಗಿದೆ ಎನ್ನಬೇಕು.

ಭಾರತವು ಎರಡನೇ ಆಡಿದೊಡ್ಡ ರಸಗೊಬ್ಬರಗಳ ಉತ್ಪಾದಕ ದೇಶವಾಗಿದ್ದರೂ, ನೈಸರ್ಗಿಕ ಸಂಪನ್ಮೂಲಗಳಾದ ಅನಿಲ, ಫಾಸ್ಫೇಟ್ ಮತ್ತು ಪೊಟ್ಯಾಸಿಕ್ ಖನಿಜಗಳು ಇತ್ಯಾದಿಗಳ ಅಸಮರ್ಪಕ ಲಭ್ಯತೆಯಿಂದಾಗಿ ರಸಗೊಬ್ಬರಗಳ ಎರಡನೇ ಅತಿದೊಡ್ಡ ಆಮದುದಾರ ರಾಷ್ಟ್ರವೂ ಆಗಿದೆ. ಆಮದಿನ ಮೇಲಿನ ಈ ಅವಲಂಬನೆಯನ್ನು ನಿವಾರಿಸಲು ಸರಕಾರವು, ಮುಚ್ಚಲ್ಪಟ್ಟ ಹಲವಾರು ರಸಗೊಬ್ಬರ ಘಟಕಗಳ ಪುನರು ಜ್ಜೀವನಕ್ಕೆ ಅನುಕೂಲ ಮಾಡಿಕೊಟ್ಟಿದೆ ಮತ್ತು 'ಆತ್ಮನಿರ್ಭರ ಭಾರತ' ಯೋಜನೆಯಡಿ ಹೊಸ ರಸಗೊಬ್ಬರ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿದೆ. ಈ ಕ್ರಮಗಳು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ರಸಗೊಬ್ಬರಗಳ ಏರಿಳಿತದಿಂದ ಭಾರತೀಯ ರೈತರನ್ನು ಯಶಸ್ವಿಯಾಗಿ ರಕ್ಷಿಸಿವೆ. ರಸಗೊಬ್ಬರಗಳ ಸಬ್ಸಿಡಿಗಳ ಮೂಲಕ ರೈತರಿಗೆ ಸರಿಯಾದ ಸಮಯದಲ್ಲಿ, ಸರಿಯಾದ ಬೆಲೆಯಲ್ಲಿ ಸಾಕಷ್ಟು ಪ್ರಮಾಣದ ರಸಗೊಬ್ಬರಗಳು ಲಭ್ಯವಾಗುವಂತೆ ಮಾಡಲು ಸರಕಾರಕ್ಕೆ ಸಾಧ್ಯವಾಗಿದೆ.

ಕೋವಿಡ್ ಸಾಂಕ್ರಾಮಿಕ ಮತ್ತು ಇತ್ತೀಚಿನ ಜಾಗತಿಕ ಭೂರಾಜಕೀಯ ಸನ್ನಿವೇಶಗಳಿಂದಾಗಿ ರಸಗೊಬ್ಬರದ ಬೆಲೆಗಳು ಹಿಂದೆಂದಿಗಿಂತಲೂ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡವು. ಇದು ನಮಗೆ ಕೆಲವು ಕಠಿಣ ಸವಾಲುಗಳನ್ನು ಒಡ್ಡಿತು. ಈ ಸವಾಲು ಗಳನ್ನು ಅವಕಾಶಗಳಾಗಿ ಪರಿವರ್ತಿಸಲು ನಾವು ನಿರ್ಧರಿಸಿದೆವು. ಪರ್ಯಾಯ ರಸಗೊಬ್ಬರಗಳ ಅಭಿವೃದ್ಧಿಗಾಗಿ ಸರಕಾರವು ದೇಶೀಯ ಸಂಶೋಧನೆಯನ್ನು ಪ್ರೋತ್ಸಾಹಿಸಿತು. ಇದರ ಫಲವೇ ಹೊಸ ದ್ರವರೂಪದ ನ್ಯಾನೊ ರಸಗೊಬ್ಬರಗಳು. ಈ ಹೊಸ ಆವಿಷ್ಕಾರಕ್ಕೆ ಎದುರಾದ ಸವಾಲೆಂದರೆ, ಪರಿಣಾಮಕಾರಿ ಗೊಬ್ಬರ ಸಿಂಪಡಣೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು. ಆದರೆ ಉದಯೋನ್ಮುಖ 'ಡ್ರೋನ್' ತಂತ್ರಜ್ಞಾನವು ಇದಕ್ಕೆ ಉತ್ತರವನ್ನು ಒದಗಿಸಿತು.

'ಕಿಸಾನ್-ಡ್ರೋನ್'ಗಳ ಆವಿಷ್ಕಾರವು ಕೃಷಿ ಪದ್ಧತಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಅಪಾರ ಸಾಧ್ಯತೆಗಳನ್ನು ತೆರೆದಿವೆ. ಕೀಟನಾಶಕಗಳು ಮತ್ತು ದ್ರವರೂಪದ ಗೊಬ್ಬರಗಳನ್ನು ಕೈಯಲ್ಲಿ ಹಿಡಿಯುವ ಪಂಪ್‌ಗಳ ಮೂಲಕ ಸಿಂಪಡಿಸುವ ಸಾಂಪ್ರದಾಯಿಕ ವ್ಯವಸ್ಥೆಯು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ.

ಆಲ್ಲದೆ, ಇದು ಹಲವು ತೊಡಕುಗಳಿಂದ ಕೂಡಿದೆ. ಸಿಂಪಡಣೆ ವೇಳೆ ವಿಷಕಾರಿ ಹಾವುಗಳು ಮತ್ತು ಹೊಲ ಗಳಲ್ಲಿ ಅಡಗಿರುವ ಕಾಡುಪ್ರಾಣಿಗಳಿಂದ ದಾಳಿಗೊಳಗಾಗುವ ಅಪಾಯಗಳೂ ಇವೆ. 'ಕೃಷಿ-ಡ್ರೋನ್'ಗಳ ಮೂಲಕದ ಸಿಂಪಡಣೆ ವ್ಯರ್ಥವನ್ನು ಒದಗಿಸುತ್ತದೆ. ಜತೆಗೆ ಸಮಯದ ಉಳಕಾಯಕ್ಕೆ ಮತ್ತು ಪರಿಣಾಮಕಾರಿ ಸಿಂಪಡಣೆಗೂ ಅವಕಾಶ ಒದಗಿಸುತ್ತದೆ. 'ಕಿಸಾನ್ ಡ್ರೋನ್'ಗಳ ಬೇಡಿಕೆಯು ನವೋದ್ಯಮಗಳು ತಮ್ಮ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಸಂಪೂರ್ಣ ಹೊಸ ಅವಕಾ

IISc. researcher comes up with water pumping system that requires zero electricity

The Hindu Bureau
BENGALURU

The efforts of a researcher at the Indian Institute of Science (IISc.) have resulted in villages in Chhattisgarh being equipped with a sustainable water pumping system that requires zero electricity.

Punit Singh, associate professor at the Centre for Sustainable Technologies (CST), has been working on a solution to address the irrigation scarcity in Chhattisgarh for the past 10 years. His efforts started with a field survey to understand the soil and terrain of Taipadar village in Bastar district.

According to IISc., owing to Mr. Singh's efforts, Taipadar is now equipped with a sustainable water pumping system that requires zero electricity. His project uses low-head check dams and cascades of such dams along rivers, with turbine pumps installed to pump water without any electricity.



The turbine uses about 90% of the river water flow at low head, which is then recycled back to the river, to generate power.

The turbine uses about 90% of the river water flow at low head (which is then recycled back to the river) to generate power, specifically torque and speed, which is then used to drive standard submersible multi-stage pumps. The novelty lies in the precise design of the system.

Depending on specific site conditions, where the water head ranges from 2 to 4 metres, the objective is to lift and transport water to different elevations, usually between 15 and 25 metres, or even up to 30 metres, if required.

Mr. Singh started working on developing turbine pumps for electricity generation during his PhD at the Karlsruhe Institute of Technology in Germany. When he returned to India in 2009, he started exploring the deployment of ram pumps in Chhattisgarh, starting with Taipadar.

"Two turbine pumps with power generation capabilities were generously sponsored by the KSB Pumps Trust in Germany. I invested about ₹50 lakh in a ram pump sourced from Rife, USA, and in the construction work, which spanned three years," Mr. Singh said.

Apart from Taipadar, similar systems were set up in Girdalpara in Sukma district and Karhani in Gourella-Pendra-Marwahi (GPM) district.

In December 2022, the Foundation for Science Innovation and Development at IISc. joined hands with the Chhattisgarh Water Resources Department to scale up the water resource management and irrigation infrastructure in the State. The areas covered under this collaboration include Karhani, Neelawaram (Sukma district), and Pongro (Jashpur district).

Govt.of Karnataka
Office of the Executive Engineer
Rural Drinking Water and Sanitation, Division Chikodi
Tel. No.: 08338-275101 E-Mail: ee.rdws.ckd@gmail.com
NO:EE/RDW&S/DN-CKD/PB/KW3&4/TENDER/2023-24/15/1902 Date:04/12/2023
TENDER NOTIFICATION
(Through E-procurement Portal only)
Tenders are invited on behalf of the governor of

KARNATAKA FOREST DEPARTMENT
OFFICE OF THE CONSERVATOR OF FORESTS & FIELD DIRECTOR
Bandipur Tiger Reserve, Gundlupet Taluk
Chamarajanagar - 571126
Ph.: 08229-236043, Fax : 0822-236060, Mob : +91 9480807733, +91 8762810600
Email : directortbtrtr@gmail.com Web : www.bandipurtigerreserve.in
No : A4/BUD/TENDER/RAILWAY BARRICADE/NUGU/CR-53/2023-
Date : 27-11-2023

08-12-2023
Hindu Pg.10

ಕಡಲೇಕಾಯಿ ಪರಿಷೆಗೆ ಬಸವನಗುಡಿ ಸಿದ್ಧ

11ರಿಂದ 13ರವರೆಗೆ ನಡೆಯಲಿರುವ ಪರಿಷೆ | ಕಡಲೇಕಾಯಿ ಮಾರಾಟಕ್ಕೆ ವ್ಯಾಪಾರಿಗಳು ಸಜ್ಜು



ಬೆಂಗಳೂರು: ಗ್ರಾಮೀಣ ಸೊಗಡನ್ನು ಇನ್ನು ಉಳಿಸಿಕೊಂಡಿರುವ ಬೆಂಗಳೂರು ಈಗ ಬಸವನಗುಡಿ ಕಡಲೇಕಾಯಿ ಪರಿಷೆಗೆ ಸಜ್ಜಾಗಿದೆ.

ಇತಿಹಾಸ ಪ್ರಸಿದ್ಧ ಬಸವನಗುಡಿ ಕಡಲೇಕಾಯಿ ಪರಿಷೆಗೆ ಕ್ಷಣಗಣನೆ ಆರಂಭವಾಗಿದ್ದು ಡಿ.11ರಿಂದ 13ರವರೆಗೆ ಪರಿಷೆ ನಡೆಯಲಿದ್ದು, ಈಗಾಗಲೇ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಪರಿಷೆ ಆರಂಭಕ್ಕೂ ಮುನ್ನವೇ ಕಡಲೇಕಾಯಿ ವ್ಯಾಪಾರಿಗಳು ಬುಲ್‌ಟೆಂಪಲ್ ರಸ್ತೆಯಲ್ಲಿ

'ಪರಿಷೆಗೆ ಬನ್ನಿ-ಕೈಚೀಲ' ತನ್ನಿ

ಈ ಬಾರಿಯೂ ಪರಿಷೆಯಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಲಾಗಿದೆ. ಬಟ್ಟೆ ಬ್ಯಾಗ್‌ಗಳನ್ನು ಮಾತ್ರ ಬಳಸುವಂತೆ ವ್ಯಾಪಾರಿಗಳಿಗೆ ಸೂಚಿಸಲಾಗಿದೆ. ಬಟ್ಟೆ ಬ್ಯಾಗ್ ಇಲ್ಲವಾದಲ್ಲಿ ಕಾಗದದ ಕವರ್‌ಗಳಲ್ಲಿ ಕಡಲೇಕಾಯಿ ಹಾಕಿಕೊಡಬೇಕೆಂದು ಸೂಚಿಸಲಾಗಿದೆ. ಇದಕ್ಕಾಗಿ ಬಿಬಿಎಂಪಿ ವತಿಯಿಂದ 'ಪರಿಷೆಗೆ ಬನ್ನಿ-ಕೈಚೀಲ' ತನ್ನಿ ಎಂಬ ಆಹ್ವಾನದೊಂದಿಗೆ ಪರಿಸರ ಸ್ನೇಹಿ ಪರಿಷೆ ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಪರಿಷೆಗೆ ಬರುವವರು ತಮ್ಮ ಮನೆಯಿಂದಲೇ ಕೈಚೀಲ ತಂದು ಕಡಲೇಕಾಯಿ ಮತ್ತಿತರ ವಸ್ತುಗಳನ್ನು ತೆಗೆದುಕೊಂಡು ಹೋಗುವಂತೆ ಅರಿವು ಮೂಡಿಸುವ ಕಾರ್ಯ ಮಾಡಲು ಮುಂದಾಗಿದೆ.

ಮಳಿಗೆ ಹಾಕಲು ಶುಲ್ಕ ಸಂಗ್ರಹ

ಕಡಲೇಕಾಯಿ ರಾಶಿ ಹಾಕಿ ಮಾರಾಟವನ್ನು ಶುರು ಮಾಡಿದ್ದಾರೆ.

ದೊಡ್ಡ ಬಸವಣ್ಣ ದೇವಾಲಯ, ದೊಡ್ಡ ಗಣಪತಿ ದೇವಾಲಯದ ಬಳಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು ದೀಪಾಲಂಕಾರ ವ್ಯವಸ್ಥೆ ಮಾಡಲಾಗುತ್ತಿದೆ.

ಭಕ್ತರು ಸರತಿ ಸಾಲಿನಲ್ಲಿ ದೇವರ ದರ್ಶನ ಮಾಡಲು ಕಟಕಟೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇನ್ನು ಕಡಲೇಕಾಯಿ ವ್ಯಾಪಾರ ಮಾಡುವವರಿಗಾಗಿ ಮಳಿಗೆಗಳನ್ನು ಹಾಕಲು ಅನುಮತಿ ನೀಡಲಾಗಿದ್ದು ಇದಕ್ಕಾಗಿ ಶುಲ್ಕವನ್ನು ಸಂಗ್ರಹಿಸಲಾಗಿದೆ. ಮಳಿಗೆಯ ಗುತ್ತಿಗೆ ಪಡೆದವರು ಪ್ರತಿ ವ್ಯಾಪಾರಿಯಿಂದ 4ರಿಂದ 5 ಸಾವಿರ ರೂ. ಶುಲ್ಕ ನಿಗದಿ ಮಾಡಿದ್ದಾರೆ. ಬುಲ್‌ಟೆಂಪಲ್‌ನ ಎರಡು ಬದಿಯಲ್ಲಿ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಲಾಗಿದೆ.

700 ಪೊಲೀಸರ ನಿಯೋಜನೆ

ದೇವಸ್ಥಾನದ ವತಿಯಿಂದ ಮೂರು ದಿನಗಳ ಕಾಲ ನಡೆಯುವ ಪರಿಷೆಗೆ ಮುಂಜಾಗ್ರತೆ ಕ್ರಮವಾಗಿ 600-700 ಸಿವಿಲ್ ಪೊಲೀಸರನ್ನು ನೇಮಕ ಮಾಡಲಾಗಿದೆ. ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಸೋಮವಾರ ಬೆಳಗ್ಗೆ 10ಗಂಟೆಗೆ ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರು ಬಸವನಿಗೆ ಕಡಲೇಕಾಯಿ ತುಲಾಭಾರದ ಮೂಲಕ ಕಡಲೇಕಾಯಿ ಪರಿಷೆ ಉದ್ಘಾಟಿಸಲಿದ್ದಾರೆ. ಈ ಕೇತ್ರದ ಶಾಸಕರು, ರಾಜಕೀಯ ಗಣ್ಯವ್ಯಕ್ತಿಗಳು ಭಾಗವಹಿಸಲಿದ್ದಾರೆ.

▪ ಅರವಿಂದ ಬಾಣು, ಬಸವನಗುಡಿ, ದೊಡ್ಡ ಗಣಪತಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ

ಕಡಲೇಕಾಯಿ ದುಬಾರಿ

ಈ ಬಾರಿ ಮಳಿಗೆ ಹಾಕಲು 4ರಿಂದ 5 ಸಾವಿರ ರೂ. ಶುಲ್ಕ ಸಂಗ್ರಹ ಮಾಡಲಾಗುತ್ತಿದೆ. ಎರಡು ದಿನಕ್ಕೆ 5 ಸಾವಿರ ಶುಲ್ಕ ದುಬಾರಿಯಾಗಿದೆ. ಈ ವರ್ಷ ಮಳೆ ಕೊರತೆಯಿಂದ ಕಡಲೆಕಾಯಿ ಇಳುವರಿಯೂ ಬಂದಿಲ್ಲ. ಇದರಿಂದ ಈ ಬಾರಿ ಲೀಟರ್ ಕಡಲೆಕಾಯಿಯನ್ನು 50 ರೂ. ಮಾರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.



ಆಹಾರೇತರ ಮಾರಾಟವೂ ಜೋರು

ಕಡಲೇಕಾಯಿ ಪರಿಷೆಯಲ್ಲಿ ಆಟಿಕೆಗಳು, ವಸ್ತ್ರಗಳು, ಮನೆಗೆ ಬೇಕಾದ ಇನ್ನಿತರ ವಸ್ತುಗಳ ಮಾರಾಟವೂ ಜೋರಾಗಿರುತ್ತದೆ. ಇದಕ್ಕೂ ಸ್ಥಳಾವಕಾಶ ನೀಡಲಾಗಿದೆ. ಮೂರು ದಿನಗಳ ಕಾಲ ಬುಲ್‌ಟೆಂಪಲ್ ರಸ್ತೆ ಸಂಪೂರ್ಣ ಪರಿಷೆಮಯವಾಗುವುದು ಖಚಿತವಾಗಿದೆ.

08-12-2023
Samyuktha Kar. Pg.3

ಕೃಷಿ ಜಾತ್ರೆ | ನಾಳೆಯಿಂದ 3 ದಿನ ಆಯೋಜನೆ | ಬೆಂ.ಕೃಷಿ ವಿವಿ, ಶ್ರೀ ನೈಸರ್ಗಿಕ್ ವತಿಯಿಂದ ಏರ್ಪಾಟು

ಆರ್ಟ್ ಆಫ್ ಲಿವಿಂಗ್‌ನಲ್ಲಿ ಸಿರಿಧಾನ್ಯ ಮೇಳ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷದ ಹಿನ್ನೆಲೆಯಲ್ಲಿ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಡಿ.9ರಿಂದ 11ರವರೆಗೆ ಜಾಗತಿಕ ಮಟ್ಟದ 'ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ' ಆಯೋಜಿಸಲಾಗಿದ್ದು, ರವಿಶಂಕರ್‌ಗುರೂಜಿ ನೇತೃತ್ವದಲ್ಲಿ ಆಗ್ರ ಸಿದ್ಧತೆ ನಡೆದಿದೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ। ಎಸ್.ವಿ.ಸುರೇಶ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಕೆವಿಕೆ ಮತ್ತು ಶ್ರೀ ನೈಸರ್ಗಿಕ್ ವತಿಯಿಂದ ಮೇಳ ನಡೆಯಲಿದೆ. ವಾಣಿಜ್ಯ ದೃಷ್ಟಿಯಿಂದ ಮಾರಾಟಗಾರರು ಮತ್ತು ಖರೀದಿದಾರರಿಗೆ ಇದು ಸೂಕ್ತ ವೇದಿಕೆಯಾಗಲಿದೆ. ಮೇಳದಲ್ಲಿ 180ಕ್ಕೂ ಅಧಿಕ ಮಳಿಗೆ ತೆರೆಯಲು ಅವಕಾಶ ಕಲ್ಪಿಸಿದ್ದು, ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದ ಏರ್ಪಡಿಸಲಾಗಿದೆ. ಸಿರಿ ಧಾನ್ಯಗಳ ಸಂಸ್ಕರಣೆ ಮಾಡುವ ಆಧುನಿಕ ಯಂತ್ರೋಪಕರಣ, ತಂತ್ರಜ್ಞಾನ ಪ್ರದರ್ಶಿಸಲಾಗುತ್ತಿದೆ ಎಂದರು.

ಡಿ.9ರಂದು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಮೇಳದ ಉದ್ಘಾಟನೆ ಮಾಡಲಿದ್ದಾರೆ. ಡಿ.10ರಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಕುರಿತು ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಸಂಶೋಧಕರು, ಆಹಾರ ಮತ್ತು ಕೃಷಿ ಕ್ಷೇತ್ರದ ವೃತ್ತಿಪರರು, ವೈಜ್ಞಾನಿಕ ಸಂಸ್ಥೆಗಳು, ಪೌಷ್ಟಿಕ ತಜ್ಞರು, ನೀತಿ ನಿರೂಪಕರು, ಉದ್ಯಮಶೀಲ ನಾವೀನ್ಯಕಾರರು, ಶಿಕ್ಷಣ ಕ್ಷೇತ್ರ, ಬಳಕೆ ಮತ್ತು ಪ್ರಚಾರದಲ್ಲಿ ತೊಡಗಿರುವ ಮೇಳದಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಹೇಳಿದರು.

ಶ್ರೀ ನೈಸರ್ಗಿಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ್ ಪ್ರಸಾದ್ ಮಾತನಾಡಿ, ಸಿರಿಧಾನ್ಯ ಪರಿಸರ ಸ್ನೇಹಿ, ಕೃಷಿ, ಜಲದಕ್ಷತೆಯ ಬೆಳೆ, ಪೌಷ್ಟಿಕಾಂಶ ದೃಷ್ಟಿಯಿಂದ, ಪೂರಕವಾಗಿವೆ.



- 3 ದಿನ ನಡೆಯಲಿರುವ ಸಿರಿಧಾನ್ಯ ಮೇಳ
- ಮಾರಾಟಗಾರರು, ಖರೀದಿಗಾರರಿಗೆ ಸೂಕ್ತ ವೇದಿಕೆ ಕಲ್ಪಿಸಲು ಮೇಳ ಆಯೋಜನೆ
- ಮೇಳದಲ್ಲಿ 180ಕ್ಕೂ ಅಧಿಕ ಮಳಿಗೆ ವ್ಯವಸ್ಥೆ
- ಕೃಷಿ ವಿಜ್ಞಾನಿಗಳು, ರೈತರ ನಡುವೆ ಸಂವಾದ
- ಸಿರಿಧಾನ್ಯ ಸಂಸ್ಕರಣೆ, ಯಂತ್ರೋಪಕರಣ, ತಂತ್ರಜ್ಞಾನದ ಪ್ರದರ್ಶನಕ್ಕೆ ಅವಕಾಶ
- ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ ಅವರ ನೇತೃತ್ವದಲ್ಲಿ ಸಕಲ ಸಿದ್ಧತೆ: ಡಾ। ಸುರೇಶ್

ಇದನ್ನು ಜಾಗತಿಕ ಮಟ್ಟದಲ್ಲಿ ಜನಾಂದೋಲನವನ್ನಾಗಿ ಮಾಡಲು ಸರ್ಕಾರದ ಜೊತೆ ನಾವು ಕೈಜೋಡಿಸಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಕೆವಿಕೆಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ। ಬಿ.ಜೋರಯ್ಯ, ಆಏಲ ಭಾರತೀಯ ಸುಸಂಘಟಿತ ಸಂಶೋಧನಾ ಪ್ರಾಯೋಜನೆ (ಸಿರಿ ಧಾನ್ಯಗಳು) ಪ್ರಾಧ್ಯಾಪಕ ಡಾ। ಟಿ.ಇ.ನಾಗರಾಜ ಮತ್ತು ಶ್ರೀ ನೈಸರ್ಗಿಕ್ ಸಂಸ್ಥೆಯ ಸಿರಿಧಾನ್ಯ ಮತ್ತು ತೈಲ ಬೀಜ ಪರಿಣತ ಉದಯ ಕುಮಾರ ಹೆಗ್ಗಡಾಳ ಇದ್ದರು.

08-12-2023
Kannada Prabha Pg.4